ವಿಷಯ :– ಬೇಲೂರು ತಾಲ್ಲೂಕಿನಲ್ಲಿ ಗಂಧದ ಮರ ಕಳ್ಳ ಸಾಗಾಣಿಕೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 460 (666)

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು) :– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೇಲೂರು ತಾಲ್ಲೂಕಿನ ಸರ್ಕಾರಿ ಜಾಗದಲ್ಲಿರುವ ಗಂಧದ ಮರ ಮತ್ತಿ ಮರಗಳು ಮರಗಳ್ಳರಿಂದ ಅವ್ಯಹತವಾಗಿ ಕಳ್ಳ ಸಾಗಾಣಿಕೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರಿ ರಸ್ತೆ ಬದಿಗಳಲ್ಲಿರುವ ಸಾಲು ಮರಗಳನ್ನು ಕಳ್ಳರು ಕಡಿದು ತೆಗೆದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಇ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :–

ಅ) ಬಂದಿದೆ. ಶ್ರೀಗಂಧದ ಮತ್ತಿತರ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯಾಗದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 1990–91 ರಲ್ಲಿ 3 ಶ್ರೀಗಂಧದ ಕಳ್ಳ ಸಾಗಾಣಿಕೆಯ ಪ್ರಕರಣವನ್ನು ಪತ್ತೆ ಮಾಡಿ ಈ ಪ್ರಕರಣಗಳಲ್ಲಿ ಬಳಸಲಾದ 2 ಕಾರು ಮತ್ತು 1 ಜೀಪನ್ನು ಮಾಲು ಸಹಿತ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಆ) ರಸ್ತೆ ಬದಿಯ ಮರಗಳು ಇದುವರೆಗೂ ಲೋಕೋಪಯೋಗಿ ಇಲಾಖೆಯವರ ವಶದಲ್ಲಿದ್ದು ಇನ್ನೂ ಅರಣ್ಯ ಇಲಾಖೆಯ ವಶಕ್ಕೆ ಕೊಟ್ಟಿರುವುದಿಲ್ಲ. ಆದರೂ ರಸ್ತೆ ಬದಿಯ ಮರಗಳನ್ನು ಅಕ್ರಮವಾಗಿ ಕಡಿಯುವ ಪ್ರಕರಣಗಳನ್ನು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ ಮತ್ತು ಮರಗಳ ರವಾನೆ ನಿಯಮಾವಳಿಗಳಿನ್ವಯ ಹಿಡಿಯಲಾಗುತ್ತಿದೆ.

ವಿಷಯ :– ಮಾಗಡಿ ತಾಲ್ಲೋಕು ಸಾವನದುರ್ಗವನ್ನು ಜಿಂಕೆಯ ಅಭಯಾರಣ್ಯವನ್ನಾಗಿ ಮಾಡುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 461 (655)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರಿಸುವರೆ ?

ಅ) ಮಾಗಡಿ ತಾಲ್ಲೂಕು ಸಾವನದುರ್ಗ ಅರಣ್ಯವನ್ನು ಜಿಂಕೆಯ ಅಭಯಾರಣ್ಯವಾಗಿ ಪರಿವರ್ತಿಸಲಾಗುವುದೇ ?

ಆ) ಹಾಗಿದ್ದಲ್ಲಿ, ಸರಕಾರವು ಈ ಬಗ್ಗೆ ಶೀಘ್ರದಲ್ಲಿ ಕ್ರಮ ಕೈಗೊಳ್ಳುವುದೇ ?

ಶ್ರೀ ಇ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :–

ಅ) ಸಾವನದುರ್ಗ ಅರಣ್ಯವನ್ನು ಜಿಂಕೆಯ ಅಭಯಾರಣ್ಯವಾಗಿ ಪರಿವರ್ತಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ಹುಬ್ಬಳ್ಳಿಯಲ್ಲಿರುವ ಮಹದೇವ ಜವಳಿ ಗಿರಣಿಯ ಲಾಭ ನಷ್ಟದ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 462 (670)

ಶ್ರೀ ಪಿ. ಸಿ. ಸಿದ್ಧನಗೌಡರ್ (ಕಲಘಟಗಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿಯಲ್ಲಿರುವ ಮಹದೇವ ಜವಳಿ ಗಿರಣಿಯ ಆಡಳಿತವನ್ನು ಸರ್ಕಾರ ವಹಿಸಿಕೊಂಡಿದ್ದು ಯಾವಾಗ ?

ಆ) ಸರ್ಕಾರ ವಹಿಸಿಕೊಂಡ ನಂತರ ಇದುವರೆವಿಗೂ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಲಾಭ ಅಥವಾ ನಷ್ಟವನ್ನು ಅನುಭವಿಸಿದೆ (ಕಳೆದ ಮೂರು ವರ್ಷಗಳ ಪ್ರತಿಯೊಂದು ವರ್ಷದ ಬಗ್ಗೆ ಪ್ರತ್ಯೇಕ ಮಾಹಿತಿ ನೀಡುವುದು).

ಇ) ಈ ಗಿರಣಿಯನ್ನು ಸರ್ಕಾರ ವಹಿಸಿಕೊಂಡ ನಂತರ ಹೂಡಿದ ಬಂಡವಾಳವೆಷ್ಟು ?